ಪತ್ರಿಕೆಯನ್ನು ಕೊಟ್ಟಿದ್ದೀರಿ, ಸದಸ್ಯರ ಹಕ್ಕುಚ್ಯುತಿಯಾಗುತ್ತದೆ. ಮದುವೆಯಾದ ಮೇಲೆ ಸೋಬಾನವೋ, ಸೋಬಾನವಾದ ಮೇಲೆ ಮದುವೆಯೊ, ಬಿಜೆಪಿಯ ಇದ್ಯಾವ ಸಂಸ್ಕೃತಿ?

ಅಧ್ಯಕ್ಷರು :- ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ, ಹಕ್ಕುಚ್ಯುತಿಯಾಗಿದ್ದರೆ, ಬೇರೆ ಸ್ವರೂಪದಲ್ಲಿ ನೋಟಿಸ್ ಅನ್ನು ಕೊಡಿ.

ಆ) ವಿಷಯ :- ದಿನಾಂಕ 10-02-2009 ರಂದು ಕೆಂಗಲ್ ಹನುಮಂತಯ್ಯನವರ ನೂರನೇ ವರ್ಷ ಸಮಾರಂಭ ಆಚರಿಸಲು ಸರ್ಕಾರ ಕಾರ್ಯಕ್ರಮ ರೂಪಿಸುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಸಭಾಧ್ಯಕ್ಷರೆ, ಶೂನ್ಯವೇಳೆಯಲ್ಲಿ ಒಂದೇ ಒಂದು ವಿಷಯವನ್ನು ನಾನೊಬ್ಬನೆ ಪ್ರಸ್ತಾಪ ಮಾಡುತ್ತೇನೆ, ಬೇರೆ ಯಾರು ಚರ್ಚೆ ಮಾಡುವುದಿಲ್ಲ. ಬೆಂಗಳೂರಿನಲ್ಲಿರುವ ವಿಧಾನ ಸೌಧವನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ದಿ:ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದರು, ಅವರು ಆ ಸ್ಥಾನದಲ್ಲಿ ಕುಳಿತುಕೊಳ್ಳಲಾಗಲಿಲ್ಲ. ನಾವು ಸರ್ಕಾರದಲ್ಲಿ ಅನೇಕ ಸಂದರ್ಭದಲ್ಲಿ ಅನೇಕ ಜನ ಶಾಸಕರು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲೇ ಎಲ್ಲಾ ಗೌರವವನ್ನು ಕೊಟ್ಟಿದ್ದೇವೆ, ಅವರ ಸ್ಟಾಚ್ಯು ಇಟ್ಟಿದ್ದೇವೆ, ಅವರ ಫೋಟೊವನ್ನು ಹಾಕಿದ್ದೇವೆ. ಆದರೆ ಈ ಫೆಬ್ರವರಿ 10ನೇ ತಾರೀಖಿಗೆ ಅವರು ಹುಟ್ಟಿ ನೂರನೇ ವರ್ಷವಾಗುತ್ತದೆ. ಹಿಂದೆ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂತ ಸಂದರ್ಭದಲ್ಲಿ, ಇದಕ್ಕೆ ಬಜೆಟ್ ನಲ್ಲಿ ಒಂದು ಪ್ರಾವಿಷನ್ ಮಾಡಿ ಹಣವನ್ನಿಟ್ಟು ಏನಾದರು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡು ಇದನ್ನು ಆಚರಣೆ ಮಾಡಬೇಕೆಂದಿದ್ದರು. ಆದರೆ ಇವತ್ತಿನವರೆವಿಗೂ ಸರ್ಕಾರ ಬದಲಾವಣೆಯಾಗಿರಬಹುದು, ಯಾವುದೆ ಒಂದು ನಿಗಧಿಯಾದ ಕಾರ್ಯಕವನ್ನು ನಿರೂಪಿಸಿಲ್ಲ. ಇದ್ದಂಥ ಹಣದಲ್ಲಿ ಯಾವುದೋ ವಿಚಾರಕ್ಕೆ ಪ್ರಚಾರಕ್ಕೆ ಆ ಇಲಾಖೆಯಲ್ಲಿ ಹಣವನ್ನ ಉಪಯೋಗಿಸಿಕೊಂಡಿದ್ದಾರೆ. ಫೆಬ್ರವರಿ 10ನೇ ತಾರೀಖು ಬರುತ್ತಿದೆ, ಬೆಂಗಳೂರಿನಲ್ಲಿರುವ ಶಾಸಕರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೊ, ಕರ್ನಾಟಕ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆಯೊ, ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ, ತಾವು ಈ ಜವಾಬ್ದಾರಿಯನ್ನು ತೆಗೆದುಕೊಂಡು ಈ ಸರ್ಕಾರದ ಕಾರ್ಯಕ್ರಮವನ್ನು ರೂಪಿಸಬೇಕು. ಯವ್ಯಾವುದಕ್ಕೊ ಕೋಟ್ಯಂತರ, ಲಕ್ಷಾಂತರ ಹಣವನ್ನು ಬಿಡುಗಡೆ ಮಾಡುತ್ತೀರಿ. ಒಂದು 5 ಕೋಟಿ ರೂಪಾಯಿಗಳನ್ನು ಈ

ಆಚರಣೆಗೋಸ್ಕರ ಇಡಬೇಕು. ಏಕೆಂದರೆ, ಅವರ ಆಚಾರ ವಿಚಾರಗಳು, ಅವರು ಮಾಡಿದಂಥ ಕಾರ್ಯಕ್ರಮಗಳು, ಅವರು ನಡೆದು ಬಂದಂಥ ಹಾದಿಯನ್ನೆಲ್ಲಾ ಜನರಿಗೆ ತಿಳಿಸುವಂಥ ವಿಚಾರ ಮತ್ತು ಅವರಿಗೆ ಗೌರವವನ್ನು ಸಲ್ಲಿಸುವಂಥ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು, ಆ ಸಂಪ್ರದಾಯವನ್ನು ನಾವು ಇಟ್ಟುಕೊಳ್ಳಬೇಕು. ಒಬ್ಬ ಮುಖ್ಯಮಂತ್ರಿ ಹುಟ್ಟಿ ನೂರು ವರ್ಷವಾದ ಮೇಲೆ ಈ ರಾಜ್ಯಕ್ಕೆ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಇಡೀ ಪ್ರಪಂಚದ ಜನರು ನಮ್ಮ ಬೆಂಗಳೂರನ್ನು ನೋಡಲು ಬಂದಾಗ, ವಿಧಾನ ಸೌಧವನ್ನು ತೋರಿಸುತ್ತಾರೆ, ನಮಗೆಲ್ಲರಿಗೂ ಒಂದು ದೊಡ್ಡ ಶಕ್ತಿಯನ್ನು ಕೊಟ್ಟಿದ್ದಾರೆ. ಆದುದರಿಂದ ಈ ಬಗ್ಗೆ ಸರ್ಕಾರ ಏನಾದರೂ ಸರ್ಕಾರದ ಕಾರ್ಯಕ್ರಮವನ್ನು ನಿಗಧಿ ಮಾಡಲು ತಾವು ಕಾರ್ಯಕ್ರಮವನ್ನು ರೂಪಿಸಬೇಕು,ಆ ಟ್ರಸ್ಟ್ ಅವರು ಕೂಡ ತಮಗೆ ಸಹಕಾರ ಕೊಡುತ್ತೇವೆಂದು ಹೇಳಿದ್ದಾರೆ, ತಾವೇ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾದ್ಯಕ್ಷರೆ, ಶಿವಕುಮಾರ್ ಅವರು ಮಾತನಾಡುವಾಗ ಹನುಮಂತಯ್ಯನವರು ಕಟ್ಟಿದ ವಿಧಾನ ಸೌಧದಲ್ಲಿ ಅವರು ಕೂರಲೇ ಇಲ್ಲವೆಂದು ಹೇಳಿದರು. ಅದೇನಾದರು ಯಡಿಯೂರಪ್ಪನವರ ಕಿವಿಗೆ ಬಿದ್ದು, ನಾಳೆ ನಾನೇನಾದರೂ ಭೂಮಿ ಪೂಜೆಯನ್ನು ಮಾಡಿದರೆ ನಾನೂ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಮುಂದಕ್ಕೆ ಹಾಕಿಬಿಟ್ಟಾರು, ದಯಮಾಡಿ ಅದನ್ನು clarify ಮಾಡಿ.

ಶ್ರೀ ಆರ್. ಅಶೋಕ್ [ಸಾರಿಗೆ ಸಚಿವರು] :- ಮಾನ್ಯ ಅಧ್ಯಕ್ಷರೆ, ಈಗಾಗಲೆ ಅವರ ಪರಿವಾರದವರ ಜೊತೆ ಮಾತನಾಡಿದ್ದೇವೆ. ಮತ್ತೊಂದು ಸಾರಿ ಅವರ ಪರಿವಾರದವರ ಜೊತೆ ಮಾತನಾಡಿ, ಏನು ಅವರ ಈ ಜನ್ಮ ಶತಮಾನೋತ್ಸವದ ಕಾರ್ಯಕ್ರಮವಿದೆ ಅದನ್ನು ಸೂಕ್ತವಾದ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಮಾಡುತ್ತೇವೆ.